# ಸರ್ಕಾರಿ (ಮಾ.ಪು) ಪ.ಪೂ ಕಾಲೇಜು (ಪ್ರೌಢಶಾಲಾ ವಿಭಾಗ) ದಾವಣಗೆರೆ ಉತ್ತರವಲಯ.

**1ನೇ ಸಂಕಲನಾತ್ಮಕ ಪರೀಕ್ಷೆ 2019-20** ಸಮಯ: 2.30ಗಂಟೆ

ಅಂಕಗಳು:-80 **ವಿಷಯ:- ಸಮಾಜ ವಿಜ್ಞಾನ** ತರಗತಿ:-10

**ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಿದ್ದು ಹೆಚ್ಚು ಸರಿಯಾದ ಉತ್ತರವನ್ನು ಆರಿಸಿ ಕ್ರಮಾಕ್ಷರಗಳೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.** **1x8=8**

1. ಮಧ್ಯಯುಗದಲ್ಲಿ ಕಾನ್‌ಸ್ಟ್ಯಾಂಟಿನೋಪಲ್ ನಗರ ಯುರೋಪಿನ ವ್ಯಾಪಾರದ ಹೆಬ್ಬಾಗಿಲು ಎಂದೆನಿಸಿಕೊಳ್ಳಲು ಈ ಅಂಶವೇ ಮುಖ್ಯ ಕಾರಣವಾಗಿತ್ತು.

   ಅ) ಸಾಮಾಜಿಕ ಆ) ರಾಜಕೀಯ ಇ) ಆರ್ಥಿಕ ಈ) ಸಾಂಸ್ಕೃತಿಕ

2. ಈ ವರದಿಯು ಬ್ರಿಟಿಷರ ಅವಧಿಯಲ್ಲಿ ಭಾರತದಲ್ಲಿ ಶಿಕ್ಷಣ ಸಾರ್ವತ್ರಿಕರಣಕ್ಕೆ ಸಹಾಯಕವಾಯಿತು.

   ಅ) ಚಾರ್ಲ್ಸ್‌ವುಡ್ ಆ) ವಾರನ್ ಹೆಸ್ಟಿಂಗ್ಸ್. ಇ) ಜೊನಾಥನ್ ಡಂಕನ್ ಈ) ಮೆಕಾಲೆ

3. ಭಾರತದ ವಿದೇಶಾಂಗ ನೀತಿ ನಿರೂಪಣೆಯಲ್ಲಿ ಮಹತ್ವದ್ದಾದ ಭಾರತ ಸಂವಿಧಾನದ ವಿಧಿ.

   ಅ) 15 ಆ) 16 ಇ) 51 ಈ) 61

4. 'ಶಿಕ್ಷಣ ಒಂದು ಸಾರ್ವಜನಿಕ ಆಸ್ತಿ' ಎಂದವರು.

   ಅ) ಗಾಂಧೀಜಿ ಆ) ಡಾ. ಬಿ.ಆರ್. ಅಂಬೇಡ್ಕರ್

   ಇ) ಸ್ವಾಮಿ ವಿವೇಕಾನಂದ ಈ) ರಾಮ್ ಮೋಹನ್‌ರಾಯ್

5. ನೀವು ನಿಮ್ಮ ಸಂತೋಷಕ್ಕಾಗಿ ಬಿಡಿಸುವ ಚಿತ್ರವು ________ ಆಗಿದೆ.

   ಅ) ಸಂಭಾವನೆ ಸಹಿತ ದುಡಿಮೆ ಆ) ಶ್ರಮ ವಿಭಜನೆ

   ಇ) ಸಂಭಾವನೆ ರಹಿತ ದುಡಿಮೆ ಈ) ಸಂಘಟಿತ ದುಡಿಮೆ

6. ಇದನ್ನು ಭಾರತೀಯ ಆದರ್ಶ ಕಾಲಮಾನ(ಐ.ಎಸ್.ಟಿ)ವನ್ನು ಸೂಚಿಸಲು ಬಳಸುತ್ತಾರೆ.

   ಅ) 23½° ಉತ್ತರ ಅಕ್ಷಾಂಶ ಆ) 23½° ದಕ್ಷಿಣ ಅಕ್ಷಾಂಶ

   ಇ) 82½° ಪೂರ್ವ ರೇಖಾಂಶ ಈ) 82½° ಪಶ್ಚಿಮ ರೇಖಾಂಶ

7. ಸಾಮಾನ್ಯವಾಗಿ ಇವರು ಗ್ರಾಮಸಭೆಗಳ ಸದಸ್ಯರಾಗಿರುತ್ತಾರೆ.

   ಅ) ಗ್ರಾಮದ ಎಲ್ಲಾ ಮತದಾರರು ಆ) ಗ್ರಾಮದ ಎಲ್ಲಾ ಪ್ರಜೆಗಳು

   ಇ) ಗ್ರಾಮದ ಎಲ್ಲಾ ಪುರುಷರು ಈ) ಗ್ರಾಮ ಪಂಚಾಯಿತಿಯ ಎಲ್ಲಾ ಸದಸ್ಯರು.

8. ವಿಪ್ರೋ : ಅಜೀಮ್ ಪ್ರೇಮ್‌ಜಿ : : ಬಯೋಕಾನ್ : ___________

   ಅ) ಡಾ. ಪ್ರತಾಪ್ ರೆಡ್ಡಿ ಆ) ನಾರಾಯಣ್ ಮೂರ್ತಿ

   ಇ) ಕಿರಣ ಮಜುಮ್‌ದಾರ್ ಷಾ ಈ) ಇಕ್ತಾಕಪೂರ್.

**2) ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯ/ ಪದದಲ್ಲಿ ಉತ್ತರ ಬರೆಯಿರಿ.** **1x8=8**

9. 1795ರಲ್ಲಿ ಭಾರತದ ಪೂರ್ವದಲ್ಲಿ ಜಯಸಾಧಿಸಿದ ಬ್ರಿಟಿಷರಿಗೆ ಭಾರತದ ದಕ್ಷಿಣ ಭಾಗದಲ್ಲಿ ಪ್ರಭುತ್ವ ಸ್ಥಾಪಿಸಲು ಸಾಧ್ಯವಾಗಲಿಲ್ಲ. ಏಕೆ?
10. ಭಾರತೀಯ ಸೈನಿಕರು ಹೊಸ ರಾಯಲ್ ಎನ್‌ಫೀಲ್ಡ್ ಬಂದೂಕು ಉಪಯೋಗಿಸದಿರಲು ಕಾರಣವೇನು?
11. ಪ್ರತಿಯೊಂದು ರಾಷ್ಟ್ರಕ್ಕೂ ಸಂಪೂರ್ಣ ನಿಶ್ಯಸ್ತ್ರೀಕರಣ ಅಸಾಧ್ಯ. ಏಕೆ?
12. ಶ್ರಮ ವಿಭಜನೆ ಎಂದರೇನು?
13. ಚಳಿಗಾಲದಲ್ಲಿ ಭಾರತದ ದಕ್ಷಿಣಭಾಗವು ಬೆಚ್ಚನೆಯ ವಾಯುಗುಣ ಹೊಂದಲು ಕಾರಣವೇನು?
14. ಉಷ್ಣವಲಯದ ನಿತ್ಯ ಹರಿದ್ವರ್ಣ ಕಾಡುಗಳು ಸದಾ ಹಸಿರಾಗಿರಲು ಕಾರಣವೇನು?
15. ನಿರಂತರ ಅಭಿವೃದ್ಧಿ ಎಂದರೇನು?
16. ಉದ್ಯಮಿಯು ಪ್ರಾಂತೀಯ ತಾರತಮ್ಯ ಹೋಗಲಾಡಿಸುತ್ತಾನೆ. ಹೇಗೆ?

**3) ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2x8=16**

17. ಸಹಾಯಕ ಸೈನ್ಯ ಪದ್ಧತಿಯು ಭಾರತೀಯ ಸಂಸ್ಥಾನಗಳನ್ನು ಹೇಗೆ ನಿಯಂತ್ರಿಸಿತ್ತು?

18. ಹೊಸ ಜಲಮಾರ್ಗದ ಅನ್ವೇಷಣೆಗೆ ಯುರಫೋಇಯನ್ನರಿಗೆ ಸಹಾಯಕವಾದ ಅಂಶಗಳಾವುವು?

19. ಭಾರತದ ವಿದೇಶಾಂಗ ನೀತಿಯ ಲಕ್ಷಣಗಳಾವುವು? <u>**ಅಥವಾ**</u>
ಭಾರತ ಮತ್ತು ಚೀನಾ ಬಾಂಧವ್ಯಕ್ಕೆ ಅಡ್ಡಿಯಾಗಿರುವ ಅಂಶಗಳಾವುವು?

20. ಭಾರತೀಯ ಸಮಾಜದಲ್ಲಿ ಸಾಮಾಜಿಕ ಅಸಮಾನತೆ ಉಂಟು ಮಾಡುವ ಅಂಶಗಳಾವುವು? ಅಥವಾ
ಸಂಭಾವನೆ ರಹಿತ ದುಡಿಮೆಯು ಸಂಭಾವನೆ ಸಹಿತ ದುಡಿಮೆಗಿಂತ ಹೇಗೆ ಭಿನ್ನವಾಗಿದೆ. ವಿವರಿಸಿ.

21. ಭಾರತದ ಉತ್ತರದ ಪರ್ವತಗಳ ಪ್ರಾಮುಖ್ಯತೆಯನ್ನು ತಿಳಿಸಿ.

22. ಮಣ್ಣಿನ ಸವೆತವನ್ನು ಹೇಗೆ ತಡೆಗಟ್ಟಬಹುದು?

23. ರಾಷ್ಟ್ರೀಯ ವರಮಾನದ ಮೂಲಕ ಅಭಿವೃದ್ಧಿ ಅಳೆಯುವುದು ಸರಿ ಅಲ್ಲ. ಹೇಗೆ?

24. ಅಂಚೆ ಕಛೇರಿಯು ಕೈಗೊಳ್ಳುವ ಹಣಕಾಸಿನ ಕಾರ್ಯಗಳಾವುವು?

<u>**4) ಈ ಕೆಳಗಿನ ಪ್ರಶ್ನೆಗಳಿಗೆ ಆರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**</u> **3x9=27**

25. ಇಂಗ್ಲೀಷರು ಶಿಕ್ಷಣ ಕ್ಷೇತ್ರದಲ್ಲಿ ಮಾಡಿದ ಬದಲಾವಣೆಗಳು ಭಾರತೀಯರಲ್ಲಿ ಮಹತ್ತರ ಬದಲಾವಣೆ ತಂದವು. ನಿರೂಪಿಸಿ.

26. ಶ್ರೀರಂಗಪಟ್ಟಣ ಒಪ್ಪಂದವು ಅಸಮಾನ ಷರತ್ತುಗಳಿಂದ ಕೂಡಿದೆ ಎಂದು ಹೇಗೆ ಹೇಳುವಿರಿ. <u>**ಅಥವಾ**</u>
1857ರ ದಂಗೆಗೆ ಆರ್ಥಿಕ ಬದಲಾವಣೆಗಳು ಹೇಗೆ ಕಾರಣವಾದವು? ವಿವರಿಸಿ.

27. ಅನಿಬೆಸೆಂಟರು ಸಮಾಜ ಸುಧಾರಕರು ಮಾತ್ರವಲ್ಲ ಒಬ್ಬ ಸ್ವತಂತ್ರ ಹೋರಾಟಗಾರರು ಆಗಿದ್ದರು. ಸಮರ್ಥಿಸಿ.

28. ಭಾರತ ವಿಶ್ವ ಪ್ರಭಾವಶಾಲಿ ರಾಷ್ಟ್ರವಾಗಿದೆ. ಹೇಗೆ?

29. ಭಾರತದಲ್ಲಿ ಅಸ್ಪೃಶ್ಯತೆ ತೊಡೆದು ಹಾಕಲು ಸರ್ಕಾರವು ಕೈಗೊಂಡಿರುವ ಕ್ರಮಗಳಾವುವು?

30. ಭಾರತದ ವಾಯುಗುಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು? <u>**ಅಥವಾ**</u>
ಅರಣ್ಯದ ಪ್ರಾಮುಖ್ಯತೆಯನ್ನು ವಿವರಿಸಿ?

31. ದೇಶದ ನೈಸರ್ಗಿಕ ಸಂಪನ್ಮೂಲಗಳಲ್ಲಿ ಜಲ ಸಂಪನ್ಮೂಲ ಅತ್ಯಂತ ಅಮೂಲ್ಯ. ಹೇಗೆ?

32. ಮಹಿಳಾ ಸಬಲೀಕರಣಕ್ಕಾಗಿ ಸರ್ಕಾರ ಕೈಗೊಂಡ ಕ್ರಮಗಳಾವುವು? <u>**ಅಥವಾ**</u>
ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರವೇನು?

33. ಬ್ಯಾಂಕ್ ಖಾತೆಯಿಂದಾಗುವ ಪ್ರಯೋಜನಗಳಾವುವು? <u>**ಅಥವಾ**</u>
ಉದ್ಯಮಿಯ ಪ್ರಾಮುಖ್ಯತೆಯನ್ನು ತಿಳಿಸಿ.

<u>**5) ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**</u> **4x4=16**

34. 1857ರ ದಂಗೆ ನಿರೀಕ್ಷಿತ ಯಶಸ್ಸು ಗಳಿಸಲಿಲ್ಲ. ಏಕೆ? <u>**ಅಥವಾ**</u>
ಭಾರತೀಯ ಸಮಾಜ ಸುಧಾರಣೆಗೆ ಬ್ರಹ್ಮ ಸಮಾಜವು ಹೇಗೆ ಶ್ರಮಿಸಿತು.

35. ನಾಲ್ಕನೇ ಆಂಗ್ಲೋ– ಮೈಸೂರು ಯುದ್ಧವನ್ನು ವಿವರಿಸಿ.

36. ಭ್ರಷ್ಟಾಚಾರ ದೇಶದ ಅಭಿವೃದ್ಧಿಯನ್ನು ಮೊಟಕುಗೊಳಿಸುತ್ತಿದೆ ಎಂಬುದನ್ನು ನೀವು ಹೇಗೆ ಹೇಳುವಿರಿ.

37. ಭಾರತದ ಆರ್ಥಿಕತೆಯ ಬೆನ್ನೆಲುಬು ಈಗಲೂ ಕೃಷಿಯೇ ಆಗಿದೆ. ಸಮರ್ಥಿಸಿ.

6) **38. ಭಾರತದ ಅಂದವಾದ ನಕ್ಷೆ ಬಿಡಿಸಿ ಅದರಲ್ಲಿ ಈ ಕೆಳಗಿನ ಸ್ಥಳಗಳನ್ನು ಗುರುತಿಸಿ.** **1+4=5**

ಅ) ಕೆ2/ ಗಾಡ್ವಿನ್ ಆಸ್ಟಿನ್ ಶಿಖರ. ಆ) ಪಶ್ಚಿಮ ಘಟ್ಟಗಳು

ಇ) ಲಕ್ಷದ್ವೀಪ ಈ) ಕೋಸಿ ಯೋಜನೆ.